ಸಂಬಂಧದಲ್ಲಿ ಮಾವನಾಗಿದ್ದರೂ ಅನುಭವದಲ್ಲಿ ಹಿರಿಯ ಕಾಮ್ರೇಡರಾದ ಆಲಿ ರೈಟರು ಅಧಿಕಾರಯುತವಾಗಿ ಕೇಳುತ್ತಿದ್ದರು.

ಮಗಳು ಜುಬೇದಾ ಓಡಿಹೋದ ದುಃಖ ಒಳಗಿದ್ದರೂ ಅವರೊಳಗಿನ ಕ್ರಾಂತಿಯ ಕಿಡಿ ಅವರಿಗೆ ಆ ಅಧಿಕಾರವನ್ನು ಕೊಟ್ಟಿತ್ತು. ಅವರ ಕ್ರಾಂತಿಯ ಕಿಡಿ ಆರದ ಹಾಗೆ ಅದರ ಅಗ್ನಿಗೆ ಆಗಾಗ ಏನಾದರೂ ಎರೆಯುತ್ತಿದ್ದ ನಾನು ಈ ದೊಡ್ಡ ಮೊತ್ತವನ್ನು ಹೇಗೆ ಆ ಅಗ್ನಿಯ ಕಿಡಿಗೆ ಎರೆಯುವುದು ಎಂದು ಯೋಚಿಸುತ್ತಿದ್ದೆ. ಸ್ವಲ್ಪವಾಗಿದ್ದರೆ ಹೋಗಲಿ ಎಂದು ಸುಮ್ಮನಿರಬಹುದಿತ್ತು. ಆದರೆ, ಐವತ್ತು ಸಾವಿರ!

* * *

'ನಿನ್ನ ಮಾವ ಯಾಕೋ ಈಗ ಸಣ್ಣ ವಾಕ್ಯಗಳನ್ನು ಹೇಳಲೂ ತಡವರಿಸುತ್ತಾರೆ' ಎಂದು ಅವರ ಹೆಂಡತಿಯೂ ನನಗೆ ಅತ್ತೆಯೂ ಆಗಬೇಕಿದ್ದ ಅಮ್ಮಾಯಿ ಕೆಲವು ಕಾಲದ ಹಿಂದೆ ಹೇಳಿದ್ದರು.

'ಮೊನ್ನೆ ಗುರುವಾರ ನಡುರಾತ್ರಿ ಎಚ್ಚರಾಗಿ ನೋಡಿದರೆ ಇವರು ಬಿಡಾರದ ಸಿಮೆಂಟಿನ ತಿಣ್ಣೆಯ ಮೇಲೆ ಕುಳಿತು ಆಕಾಶ ನೋಡುತ್ತಿದ್ದರು. ಇದೇನು ಇಲ್ಲಿ ಇಷ್ಟು ಹೊತ್ತಲ್ಲಿ ಕುಳಿತು ನೋಡುತ್ತಿದ್ದಾರೆ ಎಂದು ನೋಡಿದರೆ ನನಗೆ ಕೆಟ್ಟದಾಗಿ ಬೈದು ನನ್ನನ್ನು ಬಿಡಾರದ ಹೊರಗಡೆಯೇ ಆ ಚಳಿಯಲ್ಲಿ ಬಿಟ್ಟು, ಬಾಗಿಲಿನ ಚಿಲಕ ಹಾಕಿ ಮಲಗಿಕೊಂಡರು. ಬೆಳಗೆ ಕೇಳಿದರೆ ಅವರಿಗೆ ಇದು ಯಾವುದೂ ಗೊತ್ತೇ ಇಲ್ಲ. ನಿನಗೆ ಹುಚ್ಚಾ ಎಂದು ನನಗೇ ಬೈದರು' ಎಂದು ಅಮ್ಮಾಯಿ ಅತ್ತಿದ್ದರು.

ಕಾಫಿ ತೋಟದ ಗುಡ್ಡದ ಮೇಲೆ ಇದ್ದ ರೈಟರ ಬಿಡಾರ. ಆ ಕಾಫಿ ತೋಟ ಇದ್ದದ್ದು ಕೊಡಗು ಮತ್ತು ಕೇರಳದ ಅರಣ್ಯ ಪ್ರದೇಶದಲ್ಲಿ ಸುರುಳಿಸುರುಳಿಯಾಗಿ ಸುತ್ತುತ್ತಾ ಮೇಲೆದ್ದು ಶೃಂಗವಾಗಿ ನಿಂತಿರುವ ತೀಪೆಟ್ಟಿ ಮಲೆಯ ಎದುರಿನಲ್ಲಿ. ಕಾಲ ಕಾಲಾಂತರದಿಂದ ಮಳೆಗಾಳಿಗೂ ಎಳೆಬಿಸಿಲಿಗೂ ಸಿಲುಕಿ ಮರಗಟ್ಟಿಹೋಗಿರುವ ನಾಡ ಹಂಚಿನ ಬಿಡಾರ ಇದು. ಸ್ವಚ್ಛ ಬೇಸಗೆಯ ಕಾಲದಲ್ಲಿ ಒಂದು ಕಡೆಯಿಂದ ನೋಡಿದರೆ ತಲಕಾವೇರಿಯೂ, ಇನ್ನೊಂದು ದಿಕ್ಕಲ್ಲಿ ಅರಬೀ ಸಮುದ್ರವೂ, ಇರುಳ ರಾತ್ರಿಗಳಲ್ಲಿ ಮಡಿಕೇರಿಯ ದೀಪಗಳ ಬೆಳಕೂ ಕಾಣಿಸುವ ಈ ಪ್ರದೇಶ ಕಾಡುಗಳ್ಳರಿಗೂ, ಜಿಂಕೆ ಬೇಟೆಗಾರರಿಗೂ ಆಗಿಂದಾಗ್ಗೆ ಗೋಚರಿಸುವ ಅಪರಿಚಿತ ಆಗುಂತಕರಿಗೂ ಚಿರಪರಿಚಿತ ವನ್ಯಪ್ರದೇಶ.

ಕೊಡಗಿನವರೇ ಆದ ಮೈಸೂರಿನ 'ಸನ್ ಲೈಟ್' ಬೆಂಕಿಪೆಟ್ಟಿಗೆ ಕಾರ್ಖಾನೆಯ ಮಾಲೀಕರಾದ ಚಂಗಪ್ಪನವರು ಮಲಯಾಳೀ ಮಾಲೀಕನಿಂದ ಈ 'ಸನ್ ರೈಸ್' ಕಾಫಿ ತೋಟವನ್ನು ಖರೀದಿಸಿ ಅಲ್ಲಿನ ರೈಟರನ ಕೆಲಸಕ್ಕಾಗಿ ಕಾಮ್ರೇಡ್ ಆಲಿಯವರನ್ನು ಇಟ್ಟುಕೊಂಡಿದ್ದರು. ಹಾಗೆ ನೋಡಿದರೆ ಆ ಮಾಲೀಕರೂ ಪ್ರಖರ ಕಮ್ಯುನಿಸ್ಟರೇ ಆಗಿದ್ದರು. ಮೈಸೂರಿನ 'ಸನ್ ಲೈಟ್' ಬೆಂಕಿಪೆಟ್ಟಿಗೆ ಕಾರ್ಖಾನೆಯನ್ನೂ ಅವರು ನಡೆಸುತ್ತಿದ್ದರು. ಬೆಂಕಿಕಡ್ಡಿಗೂ ಬೆಂಕಿಪೆಟ್ಟಿಗೆಗೂ ಬೇಕಾದ ಮೃದುವಾದ ಸಟ್ಟುಗಮರ ಈ ತೀಪೆಟ್ಟಿ ಮಲೆಯ ಆಸುಪಾಸಿನಲ್ಲಿ ಇದ್ದುದರಿಂದ ಆ ಮಾಲೀಕರಿಗೆ ಈ 'ಸನ್ ರೈಸ್' ಕಾಫಿತೋಟವು ಸಟ್ಟುಗಮರವನ್ನು ಕದ್ದು ಮುಚ್ಚಿಡಲು ಒಂದು ಒಳ್ಳೆಯ ಅಡಗುದಾಣವೂ ಆಗಿತ್ತು.

ಈ 'ಸನ್ ರೈಸ್' ಕಾಫೀ ತೋಟವೂ ಆ 'ಸನ್ ಲೈಟ್' ಕಾರ್ಖಾನೆಯೂ, ಸಟ್ಟುಗದ ಮರಗಳೂ, ಅದರ ಮಾಲೀಕರಾದ ಚಂಗಪ್ಪನವರೂ, ಅವರ ತೋಟದ ರೈಟರಾದ ಕಾಮ್ರೇಡ್ ಆಲಿಯವರೂ ನೇಪಾಳದಿಂದ ಹಿಡಿದು ಜಾರ್ಖಂಡ್ ಮಾರ್ಗವಾಗಿ ತೆಲಂಗಾಣ, ತಮಿಳುನಾಡು, ಶ್ರೀಲಂಕಾ, ಕೇರಳ, ಕರ್ನಾಟಕ, ಮಹಾರಾಷ್ಟ್ರ, ಪಂಜಾಬು, ದೆಹಲಿಯವರೆಗೂ ವ್ಯಾಪಿಸಲಿದ್ದ ಕೆಂಪು ಕಾರಿಡಾರಿನ ದುಡಿಯುವವರ ಅಖಂಡರಾಜ್ಯವೊಂದರ ಕಾಲಾಳುಗಳಾಗಿದ್ದರು. ಈ ಮಹಾಪ್ರಸ್ಥಾನದಲ್ಲಿ ಒಬ್ಬೊಬ್ಬರಿಗೂ ಒಂದೊಂದು ಪಾತ್ರ. ಒಬ್ಬರು ಮಾಲೀಕರು, ಒಬ್ಬರು ರೈಟರು, ಲಕ್ಷಾಂತರ ಕಾರ್ಮಿಕರು, ಆದಿವಾಸಿಗಳು, ವಿದ್ಯಾರ್ಥಿಗಳು, ಶಿಕ್ಷಕರು, ಸಾವಿರ ಸಾವಿರ ಕವಿಗಳು, ಬುದ್ಧಿಜೀವಿಗಳು.

ಅಲ್ಲಿಯವರೆಗೆ ಎಲ್ಲರೂ ಎಲ್ಲೆಲ್ಲಿ ಇರುತ್ತಾರೋ ಅಲ್ಲಲ್ಲೇ ಅಂತರ್ಗತರಾಗಿತ್ತಾರೆ. ಕ್ರಾಂತಿಯ ಕಿಡಿ ಹತ್ತಿಕೊಂಡಾಗ ಎಲ್ಲರೂ ಭೂಮಿಯೊಳಗಿರುವ ಮಳೆಹಾತೆಗಳಂತೆ ಹೊರಬರುತ್ತಾರೆ, ದುಡಿಯುವವರ ರಾಜ್ಯ ಸ್ಥಾಪಿಸುತ್ತಾರೆ ಮತ್ತು ಯಾರೂ ಮೇಲೂ ಅಲ್ಲದ ಯಾರೂ ಕೀಳೂ ಅಲ್ಲದ ಸಮತೆಯ ರಾಜ್ಯದಲ್ಲಿ